5C.R.P.67

| Form No.4 (Civil) Deposition Sheets (R.P.No.57) |
|---|

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 11.07.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 7 ಪಿ. ಡಬ್ಲ್ಯೂ:6

| | |
|---|---|
| ಸಾಕ್ಷಿದಾರರ ಹೆಸರು | ಸ್ವಾಮಿ |
| ತಂದೆಯ ಹೆಸರು | ಮಹದೇವಯ್ಯ |
| ವಯಸ್ಸು | 44 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೆಟ್ಟಕಲ್ಲು ಗ್ರಾಮ, ಮಳವಳ್ಳಿ ತಾ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ. 5 ಪೊಲೀಸು ನೋಟಿಸು ಹಾಗೂ ನಿಪಿ.6 ಮಹಜರನ್ನು ತೋರಿಸಲಾಗಿ, ಸಾಕ್ಷಿಯು ನಿಪಿ.5 ರಲ್ಲಿ ಇರುವ ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ನಿಪಿ.6 ರಲ್ಲಿ ಇರುವ ಸಹಿಯನ್ನು ನೋಡಿ ಸದರಿ ಸಹಿ ತನ್ನದಲ್ಲ , ಅದರಲ್ಲಿ ಬರೆದಿರುವ ವಿಳಾಸ ನನ್ನದೇ ಎಂದು ಸಾಕ್ಷಿಯು ಹೇಳಿರುತ್ತಾರೆ.

1. ಸುಮಾರು 2 ವರೆ ಯಿಂದ 3 ವರುಷಗಳ ಹಿಂದೆ, ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ನಾನು ಮಳವಳ್ಳಿಯಿಂದ ಬರುತ್ತಿದಗ್ಗಾದ ನಿಪಿ.5(ಬಿ)ಸಹಿಯನ್ನು ನೆಟ್ಟಕಲ್ಲು ಗ್ರಾಮದಲ್ಲಿ ಹಾಕಿರುತ್ತೇನೆ. ನೆಟ್ಟಕಲ್ಲು ಗ್ರಾಮದಲ್ಲಿ ಇರುವ ಟೀ ಶಾಪ್ ಬಳಿ ಪೊಲೀಸರು ಸದರಿ ಸಹಿಯನ್ನು ಪಡೆದುಕೊಂಡಿದ್ದರು. ಪೊಲೀಸರು ನೆಟ್ಟಕಲ್ಲು ಗ್ರಾಮಕ್ಕೆ ಮಹಜರ್ ಗೆ ಬಂದಿದ್ದೆವೆ ಎಂದು ಹೇಳಿದ್ದರು. ಏನು ಮಹಜರು ಎಂದು ಅವರು ಹೇಳಿಲ್ಲ.
2. ಸಾಕ್ಷಿಗೆ ನಿಪಿ.7, 8 ಪೋಟೋಗಳನ್ನು ತೋರಿಸಲಾಗಿ, ಸದರಿ ಪೋಟೋದಲ್ಲಿ ತಾನು, ನಮ್ಮ ಊರಿನ ಶಿವಣ್ಣ, ಅವರ ಹೆಂಡತಿ ಹಾಗೂ ಪೊಲೀಸರು ಇದ್ದಾರೆಂದು ಗುರುತಿಸಿರುತ್ತಾರೆ. ಸದರಿ ಪೋಟೋದಲ್ಲಿ ತೋರಿಸಿರುವ ಮನೆ ನೆಟ್ಟಕಲ್ಲು ಗ್ರಾಮದಲ್ಲಿ ತೀರಿಕೊಂಡ ಮಹಿಳೆಯ ಮನೆಯಾಗಿರುತ್ತದೆ. ನಿಪಿ.7 ರಲ್ಲಿ ಪೊಲೀಸರು ಬರೆದುಕೊಳ್ಳುವುದು ಕಾಣಿಸುತ್ತದೆ. ನಿಪಿ.8

ಫೋಟೋದಲ್ಲಿ ಸೀರೆ, ಬಟ್ಟೆ ಕಾಣಿಸುತ್ತದೆ. ಪೊಲೀಸರು ಸದರಿ ವಸ್ತುಗಳನ್ನು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾನು ಬೇರೆ ವಸ್ತುಗಳನ್ನು ಅಲ್ಲಿ ಗಮನಿಸಿಲ್ಲ. ನಾನು ಹೋಗುತ್ತಿದ್ದಾಗ, ಫೋಟೋ ಬನ್ನಿ ಎಂದು ಪೊಲೀಸರು ಕರೆದುಕೊಂಡು ಹೋಗಿ ಫೋಟೋ ತೆಗೆದ ನಂತರ ನಾನು ಅಲ್ಲಿಂದ ಹೊರಟು ಹೋಗಿರುತ್ತೇನೆ.

3. ಸದರಿ ಮಹಿಳೆ ಹೇಗೆ ತೀರಿಕೊಂಡರು ಎಂದು ನನಗೆ ಮಾಹಿತಿ ಇಲ್ಲ. ಘಟನೆಗೆ ಸಂಬಂಧಪಟ್ಟ ವಸ್ತುಗಳನ್ನು ನಾನು ನೋಡಿಲ್ಲ.

4. ಸಾಕ್ಷಿಗೆ ಮುದ್ದೇಮಾಲು 1 ರಿಂದ 7 ಇರಿಸಿರುವ ಬಟ್ಟೆಯ ಚೀಲದ ಮೇಲೆ ಅಂಟಿಸಲಾದ ಚೀಟಿಗಳನ್ನು ತೋರಿಸಲಾಗಿ, ಸದರಿ ಚೀಟಿಯಲ್ಲಿ ತನ್ನ ಸಹಿ ಎಂದು ಸಾಕ್ಷಿಯು ಗುರುತಿಸುತ್ತಾರೆ. ಸದರಿ ಸಹಿಗಳನ್ನು ಮುದ್ದೆಮಾಲು.1(ಬಿ), 2(ಬಿ), 3(ಬಿ), 4(ಬಿ), 5(ಬಿ), 6(ಬಿ), ಮತ್ತು 7(ಬಿ) ಎಂದು ಗುರುತಿಸಲಾಯಿತು.

5. ಸದರಿ ಮುದ್ದೆಮಾಲು 1 ರಿಂದ 7 ರಲ್ಲಿ ಇರುವ ಸಹಿಗಳನ್ನು ಟೀ ಅಂಗಡಿಯ ಬಳಿ ಮಾಡಿರುತ್ತೇನೆ. ಪೊಲೀಸರು ಅಲ್ಲಿ ನನ್ನಿಂದ 5-6 ಸಹಿಗಳನ್ನು ಪಡೆದಿದ್ದರು. ನಿಪಿ.6 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸ್ಥಳವನ್ನು ಪೊಲೀಸರಿಗೆ ಯಾರು ತೋರಿಸಿದರು ಎಂದು ನನಗೆ ಗೊತ್ತಿಲ್ಲ.

6. ನಿಪಿ.5 ರಲ್ಲಿರುವ ಸಹಿ ಮತ್ತು ನಿಪಿ.6 ರಲ್ಲಿರುವ ಸಹಿ, ಒಂದೇ ಎಂದರೆ ಸರಿಯಲ್ಲ. ದಿಃ 04.08.2022 ರಂದು ಪೊಲೀಸರು ಫೋಟೋ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿಯು, ನಾನು ತೋಟದಿಂದ ಬರುವ ಸಮಯದಲ್ಲಿ ಫೋಟೋ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ.

7. ಸಾಕ್ಷಿಗೆ ದಿಃ 30.08.2022 ರ ಪಂಚರ ನೋಟಿಸು ಮತ್ತು ಸದರಿ ದಿನಾಂಕದ ಪಂಚನಾಮೆಯನ್ನು ತೋರಿಸಲಾಗಿ ಸದರಿ ನೋಟಿಸು ಮತ್ತು ಪಂಚನಾಮೆಯಲ್ಲಿ ತನ್ನ ಸಹಿಗಳು ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ತಾನು, ತೀರಿಕೊಂಡ ಮಹಿಳೆಯ ಮಗ ಮತ್ತು ಇನ್ನೊಬ್ಬರು ಇದ್ದಾರೆಂದು ಸಾಕ್ಷಿಯು ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿಪಿ.17 ಎಂದು ಗುರುತಿಸಲಾಯಿತು. ಸದರಿ ನಿಪಿ.17 ಫೋಟೋವನ್ನು ಏಕೆ ತೆಗೆದಿದ್ದಾರೆಂದು ಎಂದು ನನಗೆ ಗೊತ್ತಿಲ್ಲ, ನಾನು ಕೇವಲ ನಿಂತುಕೊಂಡಿದ್ದೇನೆ ಅಷ್ಟೇ. ಸದರಿ ಫೋಟೋದಲ್ಲಿ ತೋರಿಸಿರುವ ಮನೆಯು, ಸದರಿ ಮಹಿಳೆ ಹಾಗೂ ಮಹಿಳೆಯ ಮಗನ ಮನೆಯಾಗಿತ್ತು. ಯಾವ ಸಮಯದಲ್ಲಿ ಸದರಿ ಫೋಟೋವನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

ಸದರಿ ಮನೆಯಲ್ಲಿ ಪೊಲೀಸರು ಯಾಕೆ ಫೋಟೋ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

8. ನಿಪಿ.5 ಮತ್ತು 6 ರಲ್ಲಿ ರುವ ಸಹಿಗಳು ಒಂದೇ ಸಹಿಗಳು ಎಂದರೆ ಸರಿಯಲ್ಲ. ಸದರಿ ನಿಪಿ.7 ಮತ್ತು 8 ಫೋಟೋ ಗಳನುನ ತೆಗೆದ ಮನೆಯು, ನೆಟ್ಟಕಲ್ಲು ಗ್ರಾಮದ ಮಹದೇವಮ್ಮ ಮತ್ತು ಸಿದ್ದೇಗೌಡರವರ ಮನೆಯಾಗಿತ್ತು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಪೊಲಿಸೀರು ಮಹಜರನ್ನು ಸದರಿ ಮಹದೇವಮ್ಮ ರವರ ಮನೆಯಲ್ಲಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫ್ರಾಸಾ. 3 ರವರು ಹಾಜರಿದ್ದು, ಘಟನೆಯ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮಹದೇವಮ್ಮ ರವರಿಗೆ, ಅವರ ಗಂಡ ಸಿದ್ದೇಗೌಡರವರು ಸೀಮೆಎಣ್ಣೆ ಎರಚಿ, ಬೆಂಕಿಯಿಂದ ಸುಟ್ಟಿರುವ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಆಗ ಫ್ರಾಸಾ. 3 ರವರು, ಸ್ಥಳದಲ್ಲಿ ಇದ್ದ ಮುದ್ದೆ ಮಾಲು 1 ರಿಂದ 7 ವಸ್ತುಗಳನ್ನು ಪೊಲೀಸರಿಗೆ ತೋರಿಸಿ ಹಾಜರು ಪಡಿಸಿದ್ದು ಹಾಗು ಅದನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡು ಎಂದರೆ ನನಗೆ ಗೊತ್ತಿಲ್ಲ.
9. ದಿಃ 30.08.2022 ರಂದು ರಾತ್ರಿ 8.15 ರಿಂದ 9.00 ಗಂಟೆ ಸಮಯದಲ್ಲಿ, ನೆಟ್ಟಕಲ್ಲು ಗ್ರಾಮ್ದ ಮೃತ ಮಹದೇವಮ್ಮ ರವರ ಮನೆಯಲ್ಲಿ ಅವರ ಶವವನ್ನು ಆಸ್ಪತ್ರೆ ಗೆ ಸಾಗಿಸುವ ಸಂಬಂಧದಲ್ಲಿ ಪೊಲೀಸರು ಮಹಜರ್ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ, ಅವರ ಮಗ ಫ್ರಾಸಾ.1 ಸಿದ್ದರಾಜು ರವರು ಘಟನೆಯ ವಿವರಗಳನ್ನು ಪೊಲೀಸರಿಗೆ ಹೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಲು ನೋಟಿಸು ನೀಡಿ, ನಾನು ಒಪ್ಪಿಕೊಂಡು ಮೇರೆಗೆ ನನ್ನ ಸಮಕ್ಷಮದಲ್ಲಿ ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾನು ಒಪ್ಪಿಕೊಂಡ ಕಾರಣದಿಂದಲೇ ಪೊಲೀಸರು ನಿಪಿ.17 ಫೋಟೋವನ್ನು ಸ್ಥಳದಲ್ಲಿ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ.

10. ನಾನು ಸುಮಾರು 40 ವರುಷದಿಂದ ನೆಟ್ಟಕಲ್ಲು ಗ್ರಾಮದ ವಾಸಿಯಾಗಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಸಿದ್ದೇಗೌಡ ಗೊತ್ತು. ಅವರು ಹಳೆಯ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿ. ಸದರಿ ಮನೆ ಕಟ್ಟಿಸಿದ ವಿಚಾರದಲ್ಲಿ, ಆರೋಪಿಗೂ ಮತ್ತು ಅವರ ಹೆಂಡತಿ ಮಹದೇವಮ್ಮ ರವರಿಗೂ ಜಗಳ ಆಗುತ್ತಿದ್ದ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಆರೋಪಿಯು, ಮಹದೇವಮ್ಮ ರವರ ಮೇಲೆ ಸೀಮೆಎಣ್ಣೆ ಎರಚಿ, ಬೆಂಕಿ ಹಾಕಿ ಸುಟ್ಟಿದ್ದರಿಂದ ಮಹದೇವಮ್ಮ ರವರು ತೀರಿಕೊಂಡಿದ್ದು, ಸದರಿ ವಿಚಾರದಲ್ಲಿ ನನ್ನ ಸಮಕ್ಷಮದಲ್ಲಿ ನಿಪಿ.6 ಪಂಚನಾಮೆ ಹಾಗೂ ದಿಃ30.08.2022 ರಂದು ಮಹಜರ್ ಮಾಡಿಕೊಂಡ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಸದರಿ ಎರಡು ಪಂಚನಾಮೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತ ನಮ್ಮ ಊರಿನವರಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಮತಿ ಎಸ್ ಎಂ ಬಿ ವಕೀಲರಿಂದ defence counsel ರವರಿಂದ ಃ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.